**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಕೊಡಗು, ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ).**
**ಸ್ಪೆಷಲ್ ಕೇಸ್ ಸಂಖ್ಯೆಃ 5028/2023**

**ಪ್ರಾಸಾ -- 6**

**ಚಾಸಾ --6**

ಸಾಕ್ಷಿಯ ಹೆಸರು – ಸುಶೀಲಾ

ಗಂಡನ ಹೆಸರು – ಪಾಲ

ವಯಸ್ಸು – 38 ವರ್ಷ

ವೃತ್ತಿ – ಕೂಲಿ ಕೆಲಸ

ವಿಳಾಸ – ಶ್ರೀಮಂಗಲ

ದಿಃ 12.02.2025 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ**

1. ಮೃತ ಮೊಣ್ಣಿ ನನ್ನ ತಂಗಿ. ಚಾಸಾ 1 ನನ್ನ ತಂಗಿ ಮೊಣ್ಣಿಯ ಗಂಡ ಆಕೆ ಪೊನ್ನಂಪೇಟೆಯಲ್ಲಿ ಆಕೆಯ ಗಂಡ ಹಾಗೂ ಮಕ್ಕಳೊಂದಿಗೆ ವಾಸವಾಗಿದ್ದರು. ನನಗೆ ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ಇಲ್ಲ. ಈಗ್ಗೆ ಸುಮಾರು 2 ವರ್ಷಗಳ ಹಿಂದೆ ಮೊಣ್ಣಿ ಕೆಲಸ ಮಾಡುತ್ತಿದ್ದ ತೋಟದ ಸಾಹುಕಾರರು ಫೋನ್ ಮಾಡಿ ಮೊಣ್ಣಿಯ ಕೊಲೆಯಾಗಿದೆ ಎಂದು ತಿಳಿಸದರು. ನಾನು ಗೋಣಿಕೊಪ್ಪದ ಸರ್ಕಾರಿ ಆಸ್ಪತ್ರೆಗೆ ಹೋಗಿದ್ದೆ. ಅಲ್ಲಿ ನನ್ನ ತಂಗಿ ಮೊಣ್ಣಿಯ ಶವವನ್ನು ನೋಡಿದ್ದೆ. ಮೊಣ್ಣಿಯ ಕುತ್ತಿಗೆಯ ಬಳಿ ಕತ್ತಿಯಿಂದ ಕಡಿದಂತಹ ಗಾಯ ಇತ್ತು. ಅಲ್ಲಿ ಪೊಲೀಸರು ಒಂದು ದಾಖಲೆ ಬರವಣಿಗೆ ಮಾಡಿ ನನ್ನ ಸಹಿಯನ್ನು ಪಡೆದುಕೊಂಡಿದ್ದರು. ಮೊಣ್ಣಿಯನ್ನು ಯಾರು ಕೊಲೆ ಮಾಡಿದ್ದಾರೆ ಎಂದು ಗೊತ್ತಾಗಲಿಲ್ಲ. ಮೊಣ್ಣಿಯನ್ನು ಆರೋಪಿ ಕೊಲೆ ಮಾಡಿದ್ದಾರೆ ಎಂದು ಅಪ್ಪು ನನಗೆ ಹೇಳಿರುವುದಿಲ್ಲ. ಈಗ ತೋರಿಸಿದ ಛಾಯಾಚಿತ್ರಗಳಲ್ಲಿ ನನ್ನ ತಂಗಿಯ ಮೃತದೇಹ ಕಾಣಿಸುತ್ತಿದೆ. ಸದರಿ ಛಾಯಚಿತ್ರಗಳನ್ನು ಈಗಾಗಲೇ ನಿಪಿ 9 ರಿಂದ 12 ಎಂದು ಗುರುತಿಸಲಾಗಿದೆ. ನಾನು ಪೊಲೀಸರ ಸಮಕ್ಷಮ ಆರೋಪಿಯ ವಿರುದ್ಧ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸರ್ಕಾರಿ ಅಭಿಯೋಜಕರವರು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು)**

## ಪಾಟೀ ಸವಾಲು ಮಾನ್ಯ ಸರ್ಕಾರಿ ಅಭಿಯೋಜಕರವರಿಂದ

2. ದಿಃ **19.05.2023** ರಂದು ಚಾಸಾ 1 ರವರು ನನಗೆ ಫೋನ್ ಮಾಡಿ ಮೊಣ್ಣಿಯನ್ನು ಪಕ್ಕದ ಲೈನ್ ಮನೆಯಲ್ಲಿ ವಾಸವಿದ್ದ ನ್ಯಾಯಾಲಯದ ಮುಂದಿರುವ ಆರೋಪಿ ಮೊನ್ನೆ ದಿನ ರಾತ್ರಿ ಕಡಿದು ಕೊಲೆ ಮಾಡಿದ್ದಾರೆ ಎಂದು ಹೇಳಿದ್ದಾರೆ ಎಂದರೆ ಸರಿಯಲ್ಲ. ಗೋಣಿಕೊಪ್ಪ ಸರ್ಕಾರಿ ಆಸ್ಪತ್ರೆಯಲ್ಲಿ ಚಾಸಾ 1 ರವರನ್ನು ಘಟನೆಯ ಬಗ್ಗೆ ವಿಚಾರಿಸಿದಾಗ ಆತ ದಿಃ **18.05.2023** ರಂದು ಮೊಣ್ಣಿ ಹಾಗೂ ತಾನು ಸಾಹುಕಾರರ ತೋಟದಲ್ಲಿ ಕೂಲಿ ಕೆಲಸಕ್ಕೆ ಹೋಗಿ ಸಂಜೆ ಕೆಲಸ ಮುಗಿಸಿ ವಾಪಸ್ಸು ಮನೆಗೆ ಬಂದು ಮೊಣ್ಣಿ ಅಡುಗೆ ಮಾಡಿದ್ದು ರಾತ್ರಿ **9.30** ಗಂಟೆಗೆ ಮೊಣ್ಣಿ, ಚಾಸಾ 1 ಹಾಗೂ ಆತನ ತಂದೆ ಬೊಳಕ ಊಟ ಮಾಡಿ ಮಲಗಿದ್ದು ರಾತ್ರಿ **10.15** ಗಂಟೆಗೆ ಆರೋಪಿಯು ಚಾಸಾ 1 ರವರ ಮನೆಯ ಬಳಿ ಬಂದು ಅವರಿಗೆ ಬೈದಿದ್ದು ಆಗ ಚಾಸಾ 1 ಎದ್ದು ಹೊರಗಡೆ ಹೋಗಿ ಯಾಕೆ ಬೈಯುತ್ತೀಯಾ ಎಂದು ಕೇಳಿದಾಗ ಆರೋಪಿ ಪುನಃ ಬೈಯುತ್ತಿದ್ದು ಆಗ ಮೊಣ್ಣಿ ಮಲಗಿದಲ್ಲಿಂದ ಎದ್ದು ಬಂದು ಯಾಕೆ ಬೈಯುತ್ತೀಯಾ ಎಂದು ಆರೋಪಿಯನ್ನು ಕೇಳಿದಾಗ ಆರೋಪಿಯು ಅವನ ಮನೆಗೆ ಹೋಗಿ ಒಂದು ಕತ್ತಿಯನ್ನ ಹಿಡಿದುಕೊಂಡು ಬಂದು ಚಾಸಾ 1 ರವರನ್ನು ಕಡಿಯಲು ಬಂದಿದ್ದು ಆಗ ಚಾಸಾ 1 ತಪ್ಪಿಸಿಕೊಂಡಿದ್ದು ಆಗ ಆರೋಪಿಯು ಅಲ್ಲೇ ಇದ್ದ ಮೊಣ್ಣಿಯ ಕುತ್ತಿಗೆಗೆ ಕತ್ತಿಯಿಂದ ಕಡಿದಿದ್ದು ಆಕೆ ಸ್ಥಳದಲ್ಲೇ ಬಿದ್ದಿದ್ದಳು ಹಾಗೂ ಆರೋಪಿ ಚಾಸಾ 1 ರವರನ್ನು ಕಡಿಯಲು ಮುಂದಾದಾಗ ಆತ ಮನೆಯ ಒಳಗಡೆ ಸೇರಿಕೊಂಡು ಬಾತ್ ರೂಮಿನ ಚಿಲಕ ಹಾಕಿದ್ದು, ಆಗ ಆರೋಪಿ ಮನೆಯ ಒಳಗಡೆ ಬಂದು ಚಾಸಾ 1 ರವರನ್ನು ಹುಡುಕುತ್ತಿದ್ದಾಗ ಆತ ಕಿಟಕಿಯ ಮೂಲಕ ಹೊರಗೆ ಇಳಿದು ಸಾಹುಕಾರರ ಮನೆಗೆ ಹೋಗಿ ವಿಷಯ ತಿಳಿಸಿ ಆಕೆಯನ್ನು ಗೋಣಿಕೊಪ್ಪ ಆಸ್ಪತ್ರೆಗೆ ಕರೆದುಕೊಂಡು ಬಂದಿರುವುದಾಗಿ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಶವ ಪಂಚನಾಮೆ ಮಾಡುವ ಸಮಯದಲ್ಲಿ ನಾನು ಪೊಲೀಸರ ಸಮಕ್ಷಮ " ದಿನಾಂಕ **19.05.2023** ——— ತಿಳಿಸಿದರು. " ಹಾಗೂ " ದಿನಾಂಕ **18.05.2023** ——— ತಿಳಿಸಿದರು. " ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಸದರಿ ಭಾಗಗಳನ್ನು ನಿಪಿ 14 ಎಂದು ಗುರುತಿಸಲಾಯಿತು. ನಿಪಿ 14 ರಲ್ಲಿರುವ ಎಲ್ಲ ವಿಚಾರಗಳು ಗೊತ್ತಿದ್ದರೂ ಕೂಡ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಪಾಟೀ ಸವಾಲು  ಇಲ್ಲ ಎಂದು ತಿಳಿಸಿರುತ್ತಾರೆ.**

**ಮರು  ವಿಚಾರಣೆ ಇಲ್ಲ.**

**(ನನ್ನ  ಉಕ್ತಲೇಖನದಂತೆ  ತೆರೆದ  ನ್ಯಾಯಾಲಯದಲ್ಲಿ  ಬೆರಳಚ್ಚು ಮಾಡಲಾಯಿತು)**

ಓಹೇಕೇ ಸರಿ ಇದೆ

Sd/-xxx

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಡಗು-ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ)